OS No.197/2012 PW-3

<u>ದಿನಾಂಕ **28.03.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್ ಎಂ ವಕೀಲರಿಂದಃ</u>

ನಾನು ವ್ಯವಸಾಯ ಮಾಡುತ್ತೇನೆ.ವಾದಿ ಮತ್ತು ನಾನು 30 ವರ್ಷಗಳಿಂದ ಸ್ನೇಹಿತರು . ನೊಂದಣಿ ದಿನ ಪ್ರತಿವಾದಿಯನ್ನು ನೋಡಿರುತ್ತೇನೆ. ಅದಕ್ಕೂ ಮೊದಲು ಪ್ರತಿವಾದಿಯನ್ನು ನೋಡಿಲ್ಲ. ಉಪನೊಂದಣಾಧಿಕಾರಿಯವರ ಕಛೇರಿಗೆ ನಾನು ಚನ್ನಪಟ್ಟಣಕ್ಕೆ ಬಂದಾಗ ವಾದಿ ಕರೆದುಕೊಂಡು ಹೋಗಿರುತ್ತಾರೆ. ಕರಾರನ್ನು ಎಲ್ಲಿ ಬೆರಳಚ್ಚು ಮಾಡಿದರು ಎಂದು ಮರೆತಿದ್ದೇನೆ. ಆಸ್ತಿ ಮಾತುಕತೆಯಾದಾಗ ನಾನು ಇರಲಿಲ್ಲ. ವಾದಿ ವ್ಯವಸಾಯದಿಂದ ಹಣ ಬಂದಿರುತ್ತದೆ. 8 ಲಕ್ಷ ಹಣವನ್ನು ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ಅಧಿಕಾರಿಯ ಮುಂದೆ ವಾದಿ ಕೊಟ್ಟಿರುತ್ತಾನೆ. ಈ ಬಗ್ಗೆ ಕರಾರಿನಲ್ಲಿ ನಮೂದು ಮಾಡಿಲ್ಲ. ಕರಾರು ಆದಾಗ ನಾನು, ಚಿಕ್ಕಲಿಂಗಯ್ಯ ಮತ್ತು ಪತ್ರ ಬರಹಗಾರರು, ರಮೇಶ ಪ್ರತಿವಾದಿ, ಇನ್ನೊಬ್ಬರು ಇದ್ದರು. ದಿಃ10.06.2011 ರಲ್ಲಿ ವಾದಿಗೆ 8 ಲಕ್ಷ ಹಣವನ್ನು ಕೊಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸುಳ್ಳು. ಸದರಿ ದಿನ ವಾದಿ 8 ಲಕ್ಷ ಹಣವನ್ನು ಕೊಟ್ಟಿಲ್ಲ ಎಂದರೆ ಸುಳ್ಳು. ನಾನು ಮತ್ತು ವಾದಿ ಹಾಗೂ ರಮೇಶ್ ರವರು ಶಾಮೀಲಾಗಿ ಯಾವುದೇ ಹಣ ಕೊಡದೇ ಇದ್ದರೂ ಕರಾರು ಪತ್ರವನ್ನು ಬರೆಸಿಕೊಂಡಿರುತ್ತೇನೆಂದರೆ ಸುಳ್ಳು ರಮೇಶ ನನಗೆ ಸಂಬಂದಿಕನಲ್ಲ. ಈ ದಿನ ನಾನು ಬರಲು ರಮೇಶ್ ರವರು ದೂರವಾಣಿ ಮೂಲಕ ತಿಳಿಸಿರುತ್ತಾರೆ. ನಾನು ಮತ್ತು ವಾದಿ ಸ್ನೇಹಿತರಾಗಿದ್ದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ನನಗೂ ಮತ್ತು ಪ್ರತಿವಾದಿಗೂ ಯಾವುದೇ ರೀತಿಯ ಪರಿಚಯವಿಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು) **Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.